**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 768/17**

**ಸಿ.ಡಬ್ಲ್ಯೂ-6 ಪಿ.ಡಬ್ಲ್ಯೂ-7**

| | | |
|---|---|---|
| ಸಾಕ್ಷಿದಾರರ ಹೆಸರು | : | ದಿನೇಶ |
| ತಂದೆಯ/ ಗಂಡನ ಹೆಸರು | : | ಮಲ್ಲೇಶ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ಚಾಲಕ |
| ವಾಸ ಸ್ಥಳ | : | ಸಾಲಿಗ್ರಾಮ |

**ದಿನಾಂಕ 28.11.2025 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು 12 ವರ್ಷದಿಂದ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ದಿಃ04.03.2017 ರಂದು ಮಧ್ಯಾಹ್ನ 2 ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿ ಇದ್ದಾಗ ಚಾಸಾ 1 ರವರು ಚಾಸಾ 4 ರಿಂದ 6 ರವರಿಗೆ ದಾಳಿ ವಿಚಾರ ತಿಳಿಸಿ ನಂತರ ಚಾಸಾ 2 ಮತ್ತು 3 ರವರನ್ನು ಕರೆದುಕೊಂಡು ಎನ್ ಬೇಗೂರು ಆರೋಪಿ ಮನೆಯ ಹತ್ತಿರ ಹೋದಾಗ ಆರೋಪಿ ಚೀಲ ಹಿಡಿದುಕೊಂಡು ನಿಂತಿದ್ದು 2-3 ಜನ ಮದ್ಯ ಕುಡಿಯುತ್ತಿದ್ದು, ನಮ್ಮನ್ನು ನೋಡಿ ಓಡಿ ಹೋಗಿರುತ್ತಾರೆ. ಆರೋಪಿ ಓಡಿ ಹೋಗಲು ಪ್ರಯತ್ನಪಟ್ಟಿದ್ದು ಹಿಡಿದಿರುತ್ತೇವೆ. ಸದರಿ ಚೀಲವನ್ನು ಪರಿಶೀಲಿಸಲಾಗಿ 90 ml ನ 22 ಓರಿಜಿನಲ್ ಚಾಯ್ಸ್ ವಿಸ್ಕಿ 90 ml ನ 30 ವಿಂಡಸರ್ ಡಿಲೇಕ್ಸ ವಿಸ್ಕಿ ಇದ್ದು ಅವುಗಳ ಪೈಕಿ 16 ಮತ್ತು 12 ಪ್ಯಾಕೇಟ್ ಗಳನ್ನು ರಾಸಾಯನಿಕ ಪರೀಕ್ಷೆಗೆ ಪ್ರತ್ಯೇಕವಾಗಿ ತೆಗೆದು ಬಿಳಿ ಬಟ್ಟೆಯಲ್ಲಿ ಸುತ್ತಿ N ಎಂಬ

ಅಕ್ಷರದಿಂದ ಸೀಲ ಮಾಡಿ ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಮಹಜರನ್ನು ಮಧ್ಯಾಹ್ನ 3 ರಿಂದ 4 ವರೆಗೂ ಚಾಸಾ 2 ಮತ್ತು 3 ರವರ ಸಮಕ್ಷಮ ಪಂಚನಾಮೆ ಜರುಗಿಸಿರುತ್ತೇವೆ. ಅಮಾನತ್ತುಪಡಿಸಿಕೊಂಡ ಮು.ಮಾ ಗಳನ್ನು ಚಾಸಾ 1 ರವರ ಮುಂದೆ ಮುಂದಿನ ಕ್ರಮಕ್ಕಾಗಿ ಹಾಜರುಪಡಿಸಿರುತ್ತೇನೆ. ಆಸಾಮಿ ಹೆಸರು ವಿಚಾರಿಸಲಾಗಿ ಸೋಮಣ್ಣ, ಹನುಮಯ್ಯ ಎನ್ ಬೇಗೂರು ಎಂದು ತಿಳಿದು ಬಂದಿರುತ್ತದೆ. ಮಧ್ಯ ಮಾರಾಟ ಮಾಡಲು ಪರವಾನಿಗೆ ಇದೆಯಾ ಎಂದು ಕೇಳಲಾಗಿ ಇಲ್ಲ ಎಂದು ತಿಳಿಸಿರುತ್ತಾರೆ. ಮು.ಮಾ 1 ರಿಂದ 29 ನೋಡಿ ಗುರುತಿಸಿರುತ್ತಾರೆ. ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ವಿಚಾರವಾಗಿ ಹೇಳಿಕೆ ಕೊಟ್ಟಿರುತ್ತೇನೆ.

**<u>ಪಾಟೀಸವಾಲು :-ಆರೋಪಿ ಪರ ವಕೀಲರಿಂದಃ</u>**

ಮಾಹಿತಿ ಬಂದಾಗ ಠಾಣೆಯಲ್ಲಿ ಇದ್ದೆ. ಪಂಚರನ್ನು ಠಾಣೆಗೆ ಕರೆದು ಅಲ್ಲಿಂದ ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತೇವೆ. ಪಂಚರಿಗೆ ಲಿಖಿತವಾಗಿ ನೋಟಿಸ್ ಕೊಟ್ಟಿರುವುದಿಲ್ಲ. ಠಾಣೆಯಿಂದ ಬಸಾಪುರ ಮತ್ತು ಹೊನ್ನಮನ್ನಕಟ್ಟೆ 8 ಮತ್ತು 15 ಕಿ.ಮೀ ಆಗುತ್ತದೆ. ಠಾಣೆಯನ್ನು 2.30 ಗಂಟೆಗೆ ಬಿಟ್ಟಿರುತ್ತೇವೆ. ಒಟ್ಟು 6 ಜನ ಹೋಗಿರುತ್ತೇವೆ. ಠಾಣೆಯಿಂದ ಹೋಗಬೇಕಾದರೆ ದಿನಚರಿಯಲ್ಲಿ ನಮೂದಿಸುತ್ತೇವೆ ಎಂದರೆ ಚಾಸಾ 9 ರವರ ನಮೂದಿಸುತ್ತಾರೆ ಎಂದು ನುಡಿಯುತ್ತಾರೆ. ಆರೋಪಿ ಚಹರೆ ಬಗ್ಗೆ ಚಾಸಾ 1 ರವರಿಗೆ ಬಾತ್ಮಿದಾರರಿಗೆ ತಿಳಿಸಿರುತ್ತಾರೆ. ಚಾಸಾ 1 ರವರು ನಮಗೆ ಹೇಳಿರುವುದಿಲ್ಲ. ಎನ್ ಬೇಗೂರು ಗ್ರಾಮಕ್ಕೆ ಹೋಗಿ ಆರೋಪಿ ಬಗ್ಗೆ ವಿಚಾರಿಸಿರುವುದಿಲ್ಲ, ನೇರವಾಗಿ ಆರೋಪಿ ಮನೆ ಬಳಿ ಹೋಗಿರುತ್ತೇವೆ. ನಾವು ಹೋದಾಗ ಆರೋಪಿ ಮಧ್ಯ ಮಾರಾಟ ಮಾಡುತ್ತಿದ್ದರು. ನನ್ನ ಸಮಕ್ಷಮ ಮದ್ಯಪಾನ ಕುಡಿಯಲು ಬಳಸಿದ ಲೋಟ ಮತ್ತು ಖಾಲಿ ಪೌಚುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಸದರಿ ಮನೆಯಲ್ಲಿ ಯಾರು ಇದ್ದರು ಎಂದು ವಿಚಾರಿಸಿರುತ್ತಾರೆ.

ಘಟನಾ ಸ್ಥಳದ ಸುತ್ತ ವಾಸದ ಮನೆಗಳು ಇರುತ್ತವೆ ಎಂದರೆ ಸರಿ. ಸಾಮಾನ್ಯವಾಗಿ ಹಳ್ಳಿಗೆ ಪೊಲೀಸರು ಹೋದರು ಜನ ಸೇರುತ್ತಾರೆ ಎಂದರೆ ಸರಿ. ಅಲ್ಲಿ ಇದ್ದವರು ಸಹಿಯನ್ನು ಪಂಚನಾಮೆಗೆ ಪಡೆದುಕೊಂಡಿರುವುದಿಲ್ಲ. ಮು.ಮಾಲುಗಳ ಮೇಲೆ ಸಹಿ ಮಾಡಿರುವುದಿಲ್ಲ. ಮಹಜರ

ಸಮಯದಲ್ಲಿ ಮು.ಮಾಲು ಸಮೇತ ಆರೋಪಿ ಪೋಟೋ ತೆಗೆದಿರುತ್ತಾರೆ. ಮಹಜರ ಸ್ಥಳದ ಚೆಕ್ಕು ಬಂದಿ ಗೊತ್ತಿಲ್ಲ. ಮಹಜರನಲ್ಲಿ ಇರುವ ವಿಚಾರ ಗೊತ್ತಿಲ್ಲ. ಮು.ಮಾಲಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸದರಿ ದಿನ ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ, ಯಾವುದೇ ಮಹಜರ ಮಾಡಿಲ್ಲ, ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ, ಹೇಳಿಕೆ ಕೊಟ್ಟಿಲ್ಲ, ಚಾಸಾ 1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು).

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ.ಕೋಟೆ.**